ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಮಡಿಕೇರಿ

ಸಿ.ಸಿ.ಸಂಖ್ಯೆ 1126/2024

ಪಿರ್ಯಾದಿಃ ರಾಜ್ಯದ ಪರವಾಗಿ
ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ

ವಿರುದ್ಧ

ಆರೋಪಿ/ಗಳುಃ ಸುದೀಪ್ ಮತ್ತು ಇತರರು

**B ದೋಷಾರೋಪಣೆ B**

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ಆದ ನಾನು ಆರೋಪಿಯಾದ

1. ಸುದೀಪ್ ಟಿ.ಎಸ್.,
ತಂದೆಃ ಸುರೇಶ್ ಟಿ.ಎಸ್., ಪ್ರಾಯ 23 ವರ್ಷ,
ವಾಸಃ ಬಲಮುರಿ ಗ್ರಾಮ, ಮಡಿಕೇರಿ

2. ಇಬ್ರಾಹಿಂ ಎಂ.ಎ.,
ತಂದೆಃ ಖಾದರ್, 29 ವರ್ಷ,
ವಾಸಃ ಹಳೆ ತಾಲ್ಲೂಕು ಗ್ರಾಮ,
ನಾಪೊಕ್ಲು

3. ನಿಶಾಂತ್ ಎಂ.ಎಂ.,
ತಂದೆಃ ಪೌತಿ ಮೋಹನ್ ಎ.,
ಪ್ರಾಯ 27 ವರ್ಷ,
ವಾಸ ಎಂ .ಬಾಡಗ ಗ್ರಾಮ,
ಮಡಿಕೇರಿ ತಾಲ್ಲೂಕು.

Nishath

Scanned with OKEN Scanner

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ದಿನಾಂಕ 08.01.2024 ರಂದು ಮಧ್ಯಾಹ್ನ 1.00 ಗಂಟೆಗೆ ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣಾ ವ್ಯಾಪ್ತಿಯ ಸಂಪಾಜೆ ಗ್ರಾಮದಲ್ಲಿರುವ ಚಾಸಾ–1ವಿಜಯಕುಮಾರ್, ಚಾಸಾ–2 ಪುಷ್ಪಲತ ಮತ್ತು ಚಾಸಾ–3 ಚಿದ್ವಿಲಾಸ್ ರವರ ಮನೆಗೆ 1 ರಿಂದ 3ನೇ ಆರೋಪಿಗಳಾದ ನೀವುಗಳು ಕಳವು ಮಾಡುವ ಉದ್ದೇಶದಿಂದ ಕೆಎ–12–ಜೆಡ್–9165ರ ಕಾರಿನಲ್ಲಿ ಹೋಗಿ ಮನೆಯಲ್ಲಿ ಯಾರೂ ಇಲ್ಲದೇ ಇದ್ದು ಬೀಗ ಹಾಕಿರುವುದನ್ನು ಕಂಡು 1ನೇ ಆರೋಪಿಯಾದ ನೀವು ಹ್ಯಾಮರ್ ಮತ್ತು ಸ್ಕ್ರೂ ಡ್ರೈವರ್ ನಿಂದ ಮನೆಯ ಮುಂದಿನ ಲಾಕ್ ಮುರಿದು ಒಳಗಡೆ ಪ್ರವೇಶ ಮಾಡಿದ್ದು ಆ ಮೂಲಕ ಭಾ.ದಂ.ಸಂ. ಕಲಂ 454 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವುಗಳು ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಮನೆಯ ಬೆಡ್ ರೂಮಿನ ಬೀರುವಿನಲ್ಲಿದ್ದ ರೂ.20,000/– ನಗದು ಹಣ ಮತ್ತು ಟೇಬಲ್ ಡ್ರಾಯರ್ ನಲ್ಲಿದ್ದ 2 ಗ್ರಾಂ ಒಂದು ಚಿನ್ನದ ಉಂಗುರ, 8.260 ಗ್ರಾಂನ ಒಂದು ಚಿನ್ನದ ಕೈಬಳೆ ಮತ್ತು 20.11 ಗ್ರಾಂನ ಒಂದು ಚಿನ್ನದ ಸರವನ್ನು ಕಳವು ಮಾಡಿಕೊಂಡು ಹೋಗಿದ್ದು ಆ ಮೂಲಕ ಭಾ.ದಂ.ಸಂ. ಕಲಂ 380 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಯು ಆರೋಪಿಯಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 01.09.2025

1/9/25

ಪ್ರಧಾನ ಸಿವಿಲ್ ಜಡ್ಜ್ ಮತ್ತು

ಜೆ.ಎಂ.ಎಫ್.ಸಿ., ಮಡಿಕೇರಿ.

Short

Scanned with OKEN Scanner